**ಅಸಲು ದಾವಾ ನಂಃ 10/2013**
**ಪಿ.ಡಬ್ಲ್ಯೂಃ 02**

**<u>ದಿನಾಂಕಃ 27.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲು: ಶ್ರೀ ಡಿ.ಸಿ., ಪ್ರತಿವಾದಿ ಪರ ವಕೀಲರಿಂದ</u>**

1.ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯ ತಿಳಿದಿದೆ. ನಾವು ಈ ದಾವೆಯಲ್ಲಿ ಸಾಕ್ಷಿ ಪಟ್ಟಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಸದರಿ ಸಾಕ್ಷಿ ಪಟ್ಟಿಯಲ್ಲಿ ರಾಮಾನಾಯ್ಕ ಬಿನ್ ಲೋಕ್ಯಾನಾಯ್ಕ ಇವರನ್ನು ತೋರಿಸಿದ್ದೇನೆ ಎಂದರೆ ಸುಳ್ಳು. ಸದರಿ ರಾಮಾನಾಯ್ಕ ಬಿನ್ ಲೋಕ್ಯಾನಾಯ್ಕ ನನ್ನ ಅಣ್ಣ ಎಂದರೆ ಸರಿ. ರಾಮಾನಾಯ್ಕ ಬಿನ್ ಹಾಮ್ಯಾನಾಯ್ಕ ಇವರು ಚಳ್ಳಕೆರೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. ಗುಜರಿಬಾಯಿ ಲೋಕ್ಯಾನಾಯ್ಕನ ಪತ್ನಿ ಎಂದರೆ ಸರಿ. ಅಂದರೆ ಲಚ್ಚಾನಾಯ್ಕನ ವಂಶಸ್ಥರು ಎಂದರೆ ಸರಿಯಲ್ಲ. ನಂದ್ಯಾನಾಯ್ಕ ಬಿನ್ ಲಚ್ಯಾನಾಯ್ಕ ಇವರು ಲಚ್ಯಾನಾಯ್ಕನ 2 ನೇ ಮಗ ಎಂದರೆ ಸರಿ.

2. ಲೋಕ್ಯಾನಾಯ್ಕ, ಭದ್ರಾನಾಯ್ಕ ಮತ್ತು ಲಚ್ಯಾನಾಯ್ಕ ಅಣ್ಣತಮ್ಮಂದಿರು ಎಂದರೆ ಸರಿಯಲ್ಲ. ಗುಜರಿ ಬಾಯಿ ಲೋಕ್ಯಾನಾಯ್ಕನ ಹೆಂಡತಿ ಎಂದರೆ ಸರಿ. ಲೋಕ್ಯಾನಾಯ್ಕ , ಭದ್ರಾನಾಯ್ಕ ಮತ್ತು ಲಚ್ಯಾನಾಯ್ಕ ಇವರ ತಂದೆಯ ಹೆಸರು ಕಾಡ್ಯಾನಾಯ್ಕ ಎಂದರೆ ಸುಳ್ಳು. ಅವರ ತಾಯಿಯ ಹೆಸರು ಚಾಂದಿಬಾಯಿ ಎಂದರೆ ಸುಳ್ಳು. ಕಾಡ್ಯಾನಾಯ್ಕನ ಕೊನೆಯ ಮಗನ ಹೆಸರು ಲಚ್ಯಾನಾಯ್ಕ ಎಂದರೆ ಸುಳ್ಳು. ಸದರಿ ಲಚ್ಯಾನಾಯ್ಕನ ಹೆಂಡತಿ ನಾನು ಎಂದರೆ ಸರಿ. 1 ರಿಂದ 4 ನೇ ವಾದಿಗಳು ನನ್ನ ಮಕ್ಕಳು ಎಂದರೆ ಸರಿ.

3. ಲೋಕ್ಯಾನಾಯ್ಕ, ಭದ್ರಾನಾಯ್ಕ ಮತ್ತು ಲಚ್ಯಾನಾಯ್ಕ ಇವರಿಗೆ ಸರ್ವೆ ನಂಬರ್ 98 ರಲ್ಲಿ ಜಮೀನು ಇದೆ ಎಂದರೆ ಸುಳ್ಳು. ಲಲಿತಾಬಾಯಿ ಕೋಂ ಲೇಟ್ ಲಚ್ಮಾನಾಯ್ಕ ಎಂದರೆ ನಾನು. ಸರ್ವೆ ನಂಬರ್ 98/2 ಪಿ2 ರಲ್ಲಿ 2007 ರಲ್ಲಿ ನನ್ನ ಹೆಸರಿಗೆ 2 ಎಕರೆ ಜಮೀನು ಬಂದಿರುತ್ತದೆ ಎಂದರೆ ಸುಳ್ಳು. ತಿಪ್ಪೇಸ್ವಾಮಿ ಬಿನ್ ವಾಚ್ಯನಾಯ್ಕ ಇವರು ನಮ್ಮ ಊರಿನವರು ಎಂದರೆ ಸರಿ. ಅವರು ನನಗೆ ದಯಾದಿಗಳಾಗುತ್ತಾರೆ. ತಿಪ್ಪೇಸ್ವಾಮಿ ಬಿನ್ ವಾಚ್ಯನಾಯ್ಕ ಇವರು ನನ್ನ ಪತಿಯ ದಯಾದಿಗಳು ಎಂದರೆ ಸರಿಯಲ್ಲ. ತಿಪ್ಪೇಸ್ವಾಮಿ ಬಿನ್ ವಾಚ್ಯನಾಯ್ಕ ಇವರಿಗೆ 2 ಎಕರೆ ಜಮೀನು ಹೇಗೆ ಬಂದಿರುತ್ತದೆ ನನಗೆ ಗೊತ್ತಿಲ್ಲ. ಗುಜರಿಬಾಯಿ ಕೋಂ ಲೇಟ್ ಲೋಕ್ಯಾನಾಯ್ಕ ಇವರಿಗೆ

ಸರ್ವೆ ನಂಬರ್ 98/2 ರಲ್ಲಿ 4 ಎಕರೆ 3 ಗುಂಟೆ ಜಮೀನು ಇದೆ ಎಂದರೆ ಇದ್ದಿರಬಹುದು ನನಗೆ ಗೊತ್ತಿಲ್ಲ. ಸದರಿ ಗುಜರಿಬಾಯಿ ನಮ್ಮ ಊರಿನವರೇ ಎಂದರೆ ಸರಿ. ಅವರನ್ನು ನಾನು ನೋಡಿಲ್ಲ. ನನ್ನ ಮತ್ತು ನನ್ನ ಮಕ್ಕಳ ಚುನಾವಣಾ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸದರಿ ಓಟರ್ಸ್ ಲೀಸ್ಟ್ ನಲ್ಲಿ ನನ್ನ ಮತ್ತು ನನ್ನ ಮಕ್ಕಳ ಹೆಸರು ಇದೆ ಎಂದರೆ ಸರಿ. ಪ್ರತಿವಾದಿಗಳ ಹೆಸರುಗಳು ನಮ್ಮ ಓಟರ್ ಲೀಸ್ಟ್ ನಲ್ಲಿ ಎಂದರೆ ಸರಿಯಲ್ಲ. ಈ ದಾವೆ ಹಾಕುವ ಕಾಲಕ್ಕೆ ನನಗೆ 47 ವರ್ಷ ವಯಸ್ಸು ಎಂದರೆ ಸರಿ. ನನ್ನ ಮಕ್ಕಳ ಹೆರಿಗೆ ನಮ್ಮ ಮನೆಯಲ್ಲಿ ಆಗಿರುತ್ತದೆ. ಅವರ ಜನ್ಮ ದಿನಾಂಕಗಳನ್ನು ತಾಲ್ಲೂಕು ಕಚೇರಿಯಲ್ಲಿ ನಮೂದು ಮಾಡಿಸಿರುತ್ತೇನೆ. ನನ್ನ ಪತಿ ನಿಧನ ಹೊಂದಿದ ದಿನಾಂಕವನ್ನು ತಾಲ್ಲೂಕು ಕಚೇರಿಯಲ್ಲಿ ನಮೂದು ಮಾಡಿಸಿರುತ್ತೇನೆ. ನಿಪಿ.26 ಮತ್ತು 27 ರಲ್ಲಿ ನಮೂದಿಸಿರುವ ಲಚ್ಚ್ಯಾನಾಯ್ಕ ಮತ್ತು ಚಾಂದಿಬಾಯಿ ಇವರು ನಮ್ಮ ವಂಶಸ್ಥರಲ್ಲ ಮತ್ತು ಅವರು ಪ್ರತಿವಾದಿಗಳ ವಂಶಸ್ಥರು ಎಂದರೆ ಸರಿಯಲ್ಲ. ನನ್ನ ಮಕ್ಕಳನ್ನು ನನ್ನ ಪತಿ ಶಾಲಗೆ ಸೇರಿಸಿರುತ್ತಾರೆ. ಶಾಲೆಗೆ ಸೇರಿಸುವಾಗ ಜನ್ಮ ದಿನಾಂಕ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇವೆ.

4. ನನ್ನ ಗಂಡ ಮತ್ತು ನನ್ನ ಮಾವ ಕಾಳ್ಯಾನಾಯ್ಕ ಬಿನ್ ಹೇಮ್ಲಾನಾಯ್ಕ ಇವರ ವಂಶಸ್ಥರು ಎಂದರೆ ಸರಿಯಲ್ಲ. ಕಾಳ್ಯಾನಾಯ್ಕ ಬಿನ್ ಹೇಮ್ಲಾನಾಯ್ಲ ಇವರಿಗೆ ಲಚ್ಚ್ಯಾನಾಯ್ಕ ಇವರು ಕೊನೆಯ ಮಗ ಎಂದರೆ ಸುಳ್ಳು. ಲಚ್ಯಾನಾಯ್ಕನ ಹಿರಿಯ ಪತ್ನಿ ಶಾಂತಿಬಾಯಿ ಇವರು ಮದುವೆಯಾಗಿ ಎಷ್ಟು ವರ್ಷ ಆಗಿರುತ್ತದೆ ಮತ್ತು ಎಲ್ಲಿ ಆಗಿರುತ್ತದೆ ನನಗೆ ಗೊತ್ತಿಲ್ಲ. ಅವರ ತವರು ಮನೆಯಾವುದು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಶಾಂತಿಬಾಯಿ ನಿಧನ ಆಗಿ 2 ವರ್ಷ ಆಗಿರುತ್ತದೆ. ನಿಧನ ಹೊಂದುವ ಕಾಲಕ್ಕೆ ಅವರಿಗೆ 70 ವರ್ಷ ವಯಸ್ಸಾಗಿರುತ್ತದೆ. ಸದರಿ ಶಾಂತಿಬಾಯಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದರೆ ಒಬ್ಬಳೇ ಮಗಳು ಎನ್ನುತ್ತಾರೆ. ಚಾಂದ್ಲಿಬಾಯಿ, ಅವರ ಮಗ ಲಚ್ಯಾನಾಯ್ಕ ಮತ್ತು ತಂದೆ ಚಂದ್ರಾನಾಯ್ಕ ಇವರ ಓಟರ್ ಲೀಸ್ಟ್ ನಮ್ಮ ಮನೆಯಲ್ಲಿ ಇರಬಹುದು. ನನ್ನ ಪತಿಯ ಆಧಾರ್ ಕಾರ್ಡ್ ಮಾಡಿಸಿರುವುದಿಲ್ಲ. ನನ್ನ ಪತಿ ನಿಧನ ಹೊಂದಿ 8 ವರ್ಷ ಆಗಿರುತ್ತದೆ. ಪಡಿತರ ಚೀಟಿ ಮಾಡಿಸಿರುತ್ತೇವೆ. ಸದರಿ ಪಡಿತರ ಚೀಟಿಯಲ್ಲಿ ನನ್ನ ಗಂಡ, ಅವರ ತಂದೆ ಹಾಗೂ ಪೂರ್ತಿ

ಕುಟುಂಬದ ಹೆಸರುಗಳು ನಮೂದು ಇವೆ. 30 ವರ್ಷಗಳ ಹಿಂದೆ ಸದರಿ ಪಡಿತರ ಚೀಟಿ ಮಾಡಿಸಿರಬಹುದು ಮತ್ತು ಅದು ನಮ್ಮ ಮನೆಯಲ್ಲಿ ಇದೆ.

5. ದಾವಾ ಐಟಂ 3 ರ ಪೂರ್ವಕ್ಕೆ ಮುನಿನಾಯ್ಕನ ಜಮೀನು, ಪಶ್ಚಿಮಕ್ಕೆ ದೇವರಹಳ್ಳಿ ದಾರಿ, ಉತ್ತರಕ್ಕೆ ತಳಕು ನಾಯಕನಹಟ್ಟಿ ರಸ್ತೆ, ದಕ್ಷಿಣಕ್ಕೆ ರಾಮಚಂದ್ರನಾಯ್ಕನ ಜಮೀನು ಇರುತ್ತದೆ ಎಂದರೆ ಸರಿ. ಸದರಿ ಜಮೀನಿನಲ್ಲಿ ಪ್ರತಿವಾದಿಗಳ ಮನೆಗಳು ಇವೆ ಎಂದರೆ ಸರಿ. ಸದರಿ ಮನೆಗಳು ಸುಮಾರು 50-60 ವರ್ಷಗಳಿಂದ ಇವೆ ಎಂದರೆ ಸರಿ. ಸದರಿ ಮನೆಗಳಿಗೆ ವಿದ್ಯುತ್ ಚ್ಛಕ್ತಿ ಸಂಪರ್ಕ ಇದೆ ಎಂದರೆ ಸರಿ. ನಾನು ಜಮೀನಿನಲ್ಲಿ ಮನೆ ಕಟ್ಟಿಕೊಂಡು ವಾಸವಾಗಿದ್ದೇನೆ. ಜಂಭಯ್ಯನಹಟ್ಟಿಯಲ್ಲಿ ನನ್ನ ಮಗಳ ಹೆಸರಿನಲ್ಲಿ ಸರ್ಕಾರಿ ಸೌಲಭ್ಯ ಪಡೆದುಕೊಂಡು ಮನೆ ಕಟ್ಟುತ್ತಿದ್ದೇವೆ ಎಂದರೆ ಸರಿಯಲ್ಲ. ನಾವು ಜಂಭಯ್ಯನಹಟ್ಟಿ ಗ್ರಾಮದಲ್ಲಿಯೇ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆವೇ ಎಂದರೆ ಸರಿಯಲ್ಲ.

6. ರಾಮಿಜಿನಾಯ್ಕ ಮತ್ತು ಅವರ ಸಹೋದರರಿಗೆ ದಾವಾ ಸ್ವತ್ತು ಹೇಗೆ ಬಂದಿರುತ್ತನೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳ ಸಂಬಂಧ ಕ್ರಯ ಅಥವಾ ಇನ್ಯಾವುದೇ ವ್ಯವಹಾರ ಆಗಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಸ್ವತ್ತಿನ ಮೂಲ ವಿಸ್ತೀರ್ಣ ಎಷ್ಟು ಇದ್ದವು ಮತ್ತು ಎಷ್ಟು ಪೋಡುಗಳು ಆಗಿರುತ್ತವೆ ನನಗೆ ಗೊತ್ತಿಲ್ಲ. ನಾನು ಹಾಜರು ಪಡಿಸಿರುವ ಓಟರ್ ಲೀಸ್ಟ್ ಗೆ ಮಾಹಿತಿಯನ್ನು ನಾನು ಕೊಟ್ಟಿರುವುದಿಲ್ಲ ಮಗ ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಅಂದರೆ ನನ್ನ ಪ್ರಕಾರ ಮಗ ಮಾಹಿತಿ ಕೊಟ್ಟಿದ್ದಾರೆ ಎಂದರೆ ಇರಬಹುದು. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನನ್ನ ಮಗ ಕೊಟ್ಟಿರುತ್ತಾನೆ. ನಾನು ಕೊಟ್ಟಿಲ್ಲ.

7. 6 ನೇ ಪ್ರತಿವಾದಿ ಚಂದ್ರನಾಯ್ಕ ಬಿನ್ ಲಚ್ಮಾನಾಯ್ಕ ಇವರ 2 ನೇ ಪತ್ನಿ ಎಂದರೆ ಸರಿ. 7 ರಿಂದ 9 ನೇ ಪ್ರತಿವಾದಿಗಳು 6 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ. ಚಂದ್ರಾನಾಯ್ಕ ಬಿನ್ ಲಚ್ಮಾನಾಯ್ಕನ ಇವರ ಹಿರಿಯ ಪತ್ನಿ ಶಾಂತಿಬಾಯಿಗೆ ಮಕ್ಕಳಿರಲಿಲ್ಲ ಎಂದರೆ ಸರಿ. ನನ್ನ ಪತಿ ಲಚ್ಚಾನಾಯ್ಕ ಕೀಸ್ತಿಬಾಯಿ ಯವರ ವಂಶಸ್ಥರು ಎಂದರೆ ಸರಿಯಲ್ಲ. ಚಂದ್ರಾನಾಯ್ಕನ ವಂಶಸ್ಥರು. ನಮಗೂ ಪ್ರತಿವಾದಿಗಳ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ನನ್ನ ಮಗ

ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆ ಮಾಡಿದ್ದಾನೆ ಎಂದರೆ ಸರಿಯಲ್ಲ . ದಾವಾ ಸ್ವತ್ತುಗಳ ಪ್ರತಿವಾದಿಗಳ ಕಬ್ಜೆಯಲ್ಲಿವೆ ಎಂದರೆ ಸುಳ್ಳು. ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ಸುಳ್ಳು . ನನ್ನ ಪತಿ ಲಚ್ಮಾನಾಯ್ಕ ಇವರ ಹೆಸರಿಗೆ ಯಾವುದೇ ಪಹಣಿ ಇರುವುದಿಲ್ಲ ಎಂದರೆ ಲಚ್ಮಾನಾಯ್ಕ ಬಿನ್ ಚಂದ್ರಾನಾಯ್ಕ ಇವರ ಹೆಸರಿಗೆ ಪಹಣಿ ಇದೆ. ನಾನು ಜಮೀನಿನಲ್ಲಿ ಗುಡಿಸಲು ಹಾಕಿಕೊಂಡು ವಾಸ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.